ಮತ್ತು ಚಿತ್ರಕಲೆಯಲ್ಲೂ ಅಮೂರ್ತತೆ ಇರುತ್ತದೆ. ದೇವಾಲಯಗಳಲ್ಲಿ ನೋಡಿ, ಲಿಂಗ ಮತ್ತು ಯೋನಿಯ ಶಿಲ್ಪವಿದೆ. ಸಂಪೂರ್ಣ ಸೃಷ್ಟಿಯ ಚಿತ್ರವಿದು. ಏನೆಲ್ಲಾ ಮೂರ್ತ ಕಲ್ಪನೆಗಳಿಗೆ ಆಸ್ಪದ ಮಾಡಿಕೊಡುವ ಅಮೂರ್ತ ಶಬ್ದಸಮೂಹವಿದು. ಇದು ಶಿವ ಮತ್ತು ಪಾರ್ವತಿ ಕೂಡ. ಅಮೂರ್ತತೆಯ ಅವಶ್ಯಕತೆ ಇದ್ದೇ ಇದೆ. ಆದರೆ ನನಗನಿಸಿದಂತೆ, ಕವಿತೆ ಸದಾ ಮೂರ್ತಗೊಳ್ಳಲು ಹಾತೊರೆಯುತ್ತದೆ. ನಿರಾಲಾ ಅವರ ಕವಿತೆಯೊಂದಿದೆ, ಮಳೆ ಬಂದು ಮಣ್ಣಿನ ಹೆಂಟೆಗಳ ಬಿಗಿ ಅಪ್ಪುಗೆಗಳನ್ನು ಸಡಿಲಿಸಿದೆ ಅಂತ. ಇದು ಮೂರ್ತವೊ ಅಮೂರ್ತವೊ? ಇನ್ನೊಂದೆಡೆ ಹೇಳುತ್ತಾರೆ: 'ಸಂಜೆ ಸಾವಿರಾರು ಪಕ್ಷಿಗಳು ಮರದ ಕೊಂಬೆಗಳನ್ನು ಅಪ್ಪಿಕೊಂಡಿವೆ'. ಇಂಥ ಚಿತ್ರಗಳು ನಮ್ಮ ಮನಸ್ಸಿನಲ್ಲಿ ಹಲವು ಸ್ತರದ ಅರ್ಥಗಳನ್ನು ಹುಟ್ಟಿಸುತ್ತವೆ. ಭಾಷೆ ಅಮೂರ್ತವಾದಾಗ ಅರ್ಥದ ಸಾಧ್ಯತೆಗಳು ಹೆಚ್ಚುತ್ತವೆ. ರವೀಂದ್ರನಾಥ ಟ್ಯಾಗೋರ್ ಮತ್ತು ಕಬೀರರ ರಚನೆಗಳನ್ನು ನೆನಪಿಸಿಕೊಳ್ಳೋಣ. ಇವರ ಕವಿತೆಗಳಲ್ಲಿ ಇಂಥದ್ದೊಂದು ಗುಣವಿದೆ. ಆಧ್ಯಾತ್ಮಿಕ, ಅನುಭಾವಿಕ, ಮಿಸ್ಟಿಸಿಸಂ ಇದಕ್ಕೆ ಹತ್ತಿರವಾದ ಸ್ಥಿತಿ ಅದು. ರವೀಂದ್ರರಿಗೆ ಈ ಅನುಭಾವಿಕ ಪ್ರಜ್ಞೆಗೆ ಕಾರಣರಾದವರಲ್ಲಿ ಕಬೀರ್ ಕೂಡ ಒಬ್ಬರು. ಯಾಕೆಂದರೆ, ಶಾಂತಿನಿಕೇತನದಲ್ಲಿದ್ದ ಕ್ಷಿತಿಮೋಹನ್‌ಸೇನ್ ಅವರು ಕಬೀರರ ಕವಿತೆಗಳನ್ನು ಬಂಗಾಳಿಗೆ ಅನುವಾದಿಸಿದ್ದರು. ಅಲ್ಲಿಯೇ ಇದ್ದ ಹಜಾರಿ ಪ್ರಸಾದ್ ದ್ವಿವೇದಿ ಅವರು ಕಬೀರ್ ಕುರಿತು ಬರೆದಿದ್ದರು. ಈ ಚರ್ಚೆಗಳೆಲ್ಲ ರವೀಂದ್ರರನ್ನು ಖಂಡಿತಾ ಪ್ರಭಾವಿಸಿವೆ. ಕಬೀರರ ಕಾವ್ಯದಲ್ಲಿರುವ ರಹಸ್ಯವಾದ ರವೀಂದ್ರರ ಕಾವ್ಯದಲ್ಲೂ ಚಲಿಸಿದೆ. ಮೂರ್ತತೆ ಆಚೆಗಿನ ನಿರಾಕಾರ, ನಿರ್ಗುಣ ಸ್ವರೂಪವನ್ನು ಅರಿಯುವ ಹಂಬಲ ಶುರುವಾದಾಗ ಕಾವ್ಯದ ಭಾಷೆ ಕೂಡ ಬದಲಾಗುತ್ತದೆ. ಈ ರಹಸ್ಯ ಮನುಷ್ಯರನ್ನು ಯಾವಾಗಲೂ ಕಾಡುತ್ತದೆ. ನೀವು ನಿರಾಕಾರವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ನೀವು ಅದರ ಹತ್ತಿರ ಹೋದಂತೆ ಅದು ದೂರ ಸರಿಯುತ್ತದೆ. ಅದು ಸದಾ ರಹಸ್ಯದ ಆವರಣದಲ್ಲಿರುತ್ತದೆ. ಯಾವುದು ಸಂಪೂರ್ಣವಾಗಿ ಅರಿವಿಗೆ ಬರುವುದಿಲ್ಲವೊ ಅದು ನಮ್ಮ ಅಮೂರ್ತತೆಯನ್ನು ಕೆಣಕುತ್ತದೆ. ಇಲ್ಲಿಯೇ ನನಗೆ ಐನ್‌ಸ್ಟೀನ್ ಅವರ ಮಾತು ಕೂಡ ನೆನಪಾಗುತ್ತಿದೆ. ಅದೇನೆಂದರೆ, ರಹಸ್ಯಮಯತೆಯಲ್ಲಿಯೇ ಸೌಂದರ್ಯವಿದೆ. ಆಸ್ತಿಕರಲ್ಲೂ ನಾಸ್ತಿಕರಲ್ಲೂ ಸೌಂದರ್ಯವಿದೆ. ಐನ್‌ಸ್ಟೀನ್ ಬ್ರಹ್ಮಾಂಡದ ಕುರಿತು ಈ ಮಾತು ಹೇಳಿದ್ದರು. ಈ ಬ್ರಹ್ಮಾಂಡ ಯಾಕೆ ಸುಂದರವಾಗಿದೆಯೆಂದರೆ ಇದು ರಹಸ್ಯಮಯವಾಗಿರುವ ಕಾರಣದಿಂದ. ನಿಸರ್ಗದ ರಹಸ್ಯ ಎಂದೂ ಕಡಿಮೆಯಾಗುವುದಿಲ್ಲ. ಹಾಗೆಯೇ ಮನುಷ್ಯನ ಆಂತರ್ಯ ಕೂಡ ರಹಸ್ಯಮಯ ಅಲ್ಲವೆ?

**◆ ನೀವು ಅನೇಕ ಐಂದ್ರಿಕವಾದ (ಸೆನ್ಸುವಲ್) ಮತ್ತು ಕಾಮಕೇಂದ್ರಿತವಾದ (ಎರೋಟಿಕ್) ಕವಿತೆಗಳನ್ನೂ ಬರೆದಿರುವಿರಿ. ಇಂಥ ಕವಿತೆಗಳ ರಚನೆಯ ಹಿಂದಿರುವ ನಿಮ್ಮ ಜೀವನದರ್ಶನವೇನು?**

ನೀವು ನಿಧಾನಕ್ಕೆ ನನ್ನನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿದ್ದೀರಿ (ನಗು). ನಾನು ಸಂಪೂರ್ಣ ಜೀವನದಲ್ಲಿ ಆಸಕ್ತನಾದವನು. ಜೀವನದ ಅನೇಕ ಮಗ್ಗಲುಗಳನ್ನು ನೋಡಬಯಸುವವನು. ನಾನು ಬಡವರ ಬಗ್ಗೆ ಬರೆದೆ, ಪ್ರತಿಭಟನೆಯ ಬಗ್ಗೆ ಬರೆದೆ, ಕೊಂಚ ಭಾವನಾತ್ಮಕ ಕವಿತೆಗಳನ್ನೂ ಬರೆದೆ. ಹಾಗೆಯೇ ಕಾಮಕೇಂದ್ರಿತ ಕವಿತೆಗಳನ್ನೂ ಬರೆದೆ. ನನ್ನ ದೃಷ್ಟಿಯಲ್ಲಿ ಇವೆಲ್ಲ ಬೇರೆಬೇರೆ ಅಲ್ಲ. ಇದೂ ಇದೆ, ಅದೂ ಇದೆ. ಇದಿದ್ದರೆ ಅದಿಲ್ಲ, ಅದಿದ್ದರೆ ಇದಿಲ್ಲ ಅನ್ನುವ ತಿಳಿವಳಿಕೆಯನ್ನು ನಾನು ಒಪ್ಪುವುದಿಲ್ಲ. ನಿಮ್ಮ ಅಕ್ಕಮಹಾದೇವಿಯೇ ಇದ್ದಾರಲ್ಲ. ಅವರ ಕಾವ್ಯದಲ್ಲಿ ಎಲ್ಲವೂ ಇದೆ. ಅನೇಕ ಅನುಭವಗಳು ಐಂದ್ರಿಕವಾಗಿಯೇ ಒದಗುತ್ತವೆ. ಇಂದ್ರಿಯಗಳು ಕ್ರಿಯಾಶೀಲವಾಗುತ್ತವೆ. ಗಂಡು ಮತ್ತು ಹೆಣ್ಣಿನ ಸಂಬಂಧದ ಕುರಿತು ಬರೆಯುವಾಗ ಸೆನ್ಸುವಲ್ ಅಥವಾ ಮಾಂಸಲವಾದ ಕವಿತೆಗಳು ರಚನೆಗೊಳ್ಳುತ್ತವೆ. ಮನುಷ್ಯರು ಭೂಮಿಗೆ ಬಂದಾಗಿನಿಂದ ದೇಹದ ಬಗ್ಗೆ ಎಷ್ಟೆಲ್ಲ ಕಥನಗಳು ಹುಟ್ಟಿಕೊಂಡಿವೆ. ಮನುಷ್ಯರ ದೇಹದಷ್ಟು ಸುಂದರವಾದದ್ದು ಈ ಜಗತ್ತಿನಲ್ಲಿ ಇನ್ನೊಂದಿಲ್ಲ. ಇಡೀ ಬ್ರಹ್ಮಾಂಡದಲ್ಲಿಯೇ ಸುಂದರವಾದದ್ದು ಗಂಡು ಮತ್ತು ಹೆಣ್ಣಿನ ದೇಹ. ಇದನ್ನು ಹೊರತುಪಡಿಸಿದರೆ ಯಾವ ಸೃಷ್ಟಿಯೂ ಸಾಧ್ಯವಿಲ್ಲ. ಅರ್ಧನಾರೀಶ್ವರ ಕಲ್ಪನೆ ಕೂಡ ಇದೆಯಲ್ಲವೆ? ಶಿವನು ಪಾರ್ವತಿಯ ಜೊತೆ ಇದ್ದಾಗ ಮಾತ್ರ ಆತನಿಗೆ